# <u>ನರಸಿಂಹ ಮಂತ್ರ ಒಂದೇ ಸಾಕು</u>

( Version 1 )

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi (listed as Version 2), page no. 310.
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru. (listed as Version 1), page no. 12.
3. **Note:** The lyrics considered here are as per Ref. 2 above. The singer has followed these wordings. These lyrics are listed separately as Version 1.
4. **Note:** There is one more song similar to this. That is "narasimha mantra vondiralu sAku" – "ನರಸಿಂಹ ಮಂತ್ರವೊಂದಿರಲು ಸಾಕು". This is listed as a separate song as Version 2, because, many singers have sung it like this. Also, these lyrics are available in the standard book (Ref. 1 above).
5. **Note:** Ankitas are same in both the versions (version 1 and version 2).

ರಾಗ: ಬಿಲಹರಿ ತಾಳ: ಅಟ್ಟ

ನರಸಿಂಹ ಮಂತ್ರ ಒಂದೇ ಸಾಕು -ಮಹಾ
ದುರಿತಕೋಟೆಗಳ ಸಂಹರಿಸಿ ಭಾಗ್ಯವನೀವ ॥ ಪ ॥

ಹಸುಳೆ ಪ್ರಹ್ಲಾದನ ತಲೆಗಾಯ್ದುದೀ ಮಂತ್ರ
ಅಸುರನೊಡಲ ಬಗೆದ ದಿವ್ಯ ಮಂತ್ರ
ವಸುಧೆಯೊಳು ದಾನವರ ಅಸುವ ಹೀರಿದ ಮಂತ್ರ
ಪಶುಪತಿಗೆ ಪ್ರಿಯವಾದ ಮೂಲ ಮಂತ್ರ ॥ 1 ॥

ದಿಟ್ಟ ಧ್ರುವ ರಾಯಗೆ ಪಟ್ಟಗಟ್ಟಿದ ಮಂತ್ರ
ಶಿಷ್ಟ ವಿಭೀಷಣನ ಪೊರೆದ ಮಂತ್ರ
ತುಟ್ಟತುದಿಯೊಳಜಾಮಿಳನ ಸಲಹಿದ ಮಂತ್ರ
ಮುಟ್ಟ ಭಜಿಪರಿಗಿದು ಮೋಕ್ಷ ಮಂತ್ರ ॥ 2 ॥

ಹಿಂಡು ಭೂತವ ಕಡಿದು ತುಂಡು ಮಾಡುವ ಮಂತ್ರ
ಕೊಂಡಾಡೆ ಲೋಕಕುದ್ದಂಡ ಮಂತ್ರ
ಗಂಡುಗಲಿ ಪ್ರಚಂಡ ಹಿಂಡು ದಾನವರ
ಗಂಡ ಪುರಂದರ ವಿಠಲನ ಮಹಾ ಮಂತ್ರ    ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಶ್ರೀ ಹರಿಯ ಅನಂತ ನಾಮಗಳಲ್ಲಿ ನರಸಿಂಹ ನಾಮದ ಮಹಿಮೆಯನ್ನು ಈ ಹಾಡಿನಲ್ಲಿ ಹೇಳಲಾಗಿದೆ. ನರಸಿಂಹ ಮಂತ್ರವು ಭೂತೋಚ್ಚಾಟನೆ ಮಾಡುವುದೆಂಬ ಪರಂಪರೆ ನಮ್ಮಲ್ಲಿದೆ.

**ತಲೆಗಾಯು** = ಸಂರಕ್ಷಿಸು

**ಅಸುರ** = ಹಿರಣ್ಯ ಕಷಿಪು

**ಪಶುಪತಿ** = ಶಿವ

**ಮೂಲ ಮಂತ್ರ** = ಓಂ ನಮೋ ವಾಸುದೇವಾಯ

**Classification:** Keerthane
**Ankita:** purandara vittala
**Location:** NA
**Category:** Narasimha Stuti, Mahatmya Gynana
**Group Words:** Narasimha, pati, mantra, prahallada, Bhagya, asura, divya, bhumi, shiva, Dhruva, vibhshana, ajamila, mukti, bhajane, loka,
**Pravachana:** NA
**Explanation:** NA